ಒಟ್ಟು ದೂರುಗಳು ಸ್ವೀಕರಿಸಿರುವುದು

1999–2000	222
2000–2001	247
2001–2002	250
2002–2003	339

ಆ) ಮೈಸೂರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯಲ್ಲಿ 1999ನೇ ವರ್ಷದ ಪ್ರಾರಂಭದಿಂದ 2002ನೇ ವರ್ಷದ ಅಂತ್ಯದವರೆಗೆ ಪಿರ್ಯಾದುಗಳ ದಾಖಲಾತಿ, ಇತ್ಯರ್ಥ ಮತ್ತು ಬಾಕಿಯ ವಿವರ ಈ ಕೆಳಕಂಡಂತೆ ಇರುತ್ತದೆ:

ವರ್ಷ	ಪ್ರಾರಂಭ ಶಿಲ್ಕು	ಆಯಾ ವರ್ಷದಲ್ಲಿ ಸ್ವೀಕರಿಸಿದ ಪಿರ್ಯಾದುಗಳು	ಒಟ್ಟು	ಆಯಾ ವರ್ಷದಲ್ಲಿ ಇತ್ಯರ್ಥವಾದ ಪಿರ್ಯಾದುಗಳು	ಬಾಕಿ
1999	215	222	437	264	173
2000	173	247	420	156	264
2001	264	250	514	168	346
2002	246	339	685	468	217

ಮೈಸೂರು ಜಿಲ್ಲಾ ವೇದಿಕೆಯು ಪ್ರಾರಂಭದಿಂದ ದಿನಾಂಕ: 31.5.2003ರ ಅಂತ್ಯದವರೆಗೆ ಪ್ರಕರಣಗಳ ದಾಖಲಾತಿ, ಇತ್ಯರ್ಥ ಮತ್ತು ಬಾಕಿ ಇರುವ ಅಂಶಗಳ ವಿವರ ಈ ಕೆಳಕಂಡಂತೆ ಇರುತ್ತದೆ:

ದಾಖಲಾತಿ	ಇತ್ಯರ್ಥ	ಬಾಕಿ
3883	3738	145

ಗ್ರಾಹಕ ಸಂರಕ್ಷಣಾ ಕಾಯ್ದೆ, 1986ರ 3ನೇ ಅಧ್ಯಾಯದಡಿಯಲ್ಲಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ವೇದಿಕೆಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ. ಈಗಾಗಲೇ ಹೊಸದಾಗಿ ಸೃಜಿಸಿರುವ ಉಡುಪಿ, ಬಾಗಲಕೋಟೆ, ಕೊಪ್ಪಳ, ಗದಗ ಮತ್ತು ಚಾಮರಾಜನಗರ ಜಿಲ್ಲೆಗಳನ್ನು ಹೊರತುಪಡಿಸಿ, ಇನ್ನುಳಿದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ವೇದಿಕೆಗಳು ಕಾರ್ಯನಿರ್ವಹಿಸುತ್ತಿವೆ.

ಇ) ಗ್ರಾಹಕರಿಗೆ ತಿಳುವಳಿಕೆ ಮೂಡಿಸುವ ಜವಾಬ್ದಾರಿಯು ಗ್ರಾಹಕರ ಸಂರಕ್ಷಣಾ ಕಾಯ್ದೆ, 1986ರ 2ನೇ ಅಧ್ಯಾಯದಡಿಯಲ್ಲಿ ರಚಿತವಾಗಿರುವ ಕರ್ನಾಟಕ ರಾಜ್ಯ ಗ್ರಾಹಕರ ಪರಿಷತ್ತಿನದ್ದಾಗಿದೆ. ಜಿಲ್ಲಾ ಗ್ರಾಹಕ ಪರಿಷತ್ತನ್ನು ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ವೇದಿಕೆಗಳಲ್ಲಿ ಸದರಿ ವೇದಿಕೆಗಳು ಪ್ರಾರಂಭವಾದಾಗಿನಿಂದ ದಿನಾಂಕ: 31ನೇ ಮೇ 2003ರ ಅಂತ್ಯದವರೆಗೆ, 71,972 ಪಿರ್ಯಾದುಗಳನ್ನು ಸ್ವೀಕರಿಸಿದ್ದು, 65,679 ಪಿರ್ಯಾದುಗಳು ಮಾತ್ರ ವಿಚಾರಣೆ ಹಂತದಲ್ಲಿರುತ್ತದೆ.

ಮೈಸೂರಿನ ಬಂಡೀಪಾಳ್ಯದ ಎ.ಪಿ.ಎಂ.ಸಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ

2383 (2719) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರಿನ ಬಂಡೀಪಾಳ್ಯದ ಎ.ಪಿ.ಎಂ.ಸಿ.ಯಲ್ಲಿನ ಮೂಲಭೂತ ಸೌಕರ್ಯಗಳ ವಿವರ ನಿಡುವುದು;

ಆ) ಆ ವರ್ತಕರ ಅನುಕೂಲಕ್ಕಾಗಿ ಪೂರ್ಣ ಪ್ರಮಾಣದಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು ಖರ್ಚಾಗುವ ಅಂದಾಜು ವೆಚ್ಚದ ವಿವರ ನೀಡುವುದು;

ಇ) ಪೂರ್ಣ ಪ್ರಮಾಣದಲ್ಲಿ ಸಮಗ್ರವಾಗಿ ಮೂಲಭೂತ ಸೌಕರ್ಯಗಳನ್ನು ಈ ಕೂಡಲೇ ಕಲ್ಪಿಸಿಕೊಡಲು ಸರ್ಕಾರ ಯಾವ ಯಾವ ಕ್ರಮವಹಿಸುವುದು; ಹಾಗೂ ಬೇಕಾಗುವ ಸಮಯಾವಕಾಶವೆಷ್ಟು?

ಶ್ರೀ ಬಿ.ಎಸ್. ಪಾಟೀಲ್ (ಕೃಷಿ ಮಾರುಕಟ್ಟೆ ಸಚಿವರು)

ಅ) ವಿವರವನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ವಿವರವನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಇ) ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ನಿರಂತರ ಪ್ರಕ್ರಿಯೆಯಾಗಿದ್ದು, ಈಗಾಗಲೇ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗಿದೆ. ಪ್ರಸ್ತುತ ಅವಶ್ಯವಿರುವ ಹೆಚ್ಚುವರಿ ಸೌಲಭ್ಯಗಳನ್ನು ಒದಗಿಸಲು ಕ್ರಮ ಜರುಗಿಸಿದ್ದು, ಆದಷ್ಟು ಶೀಘ್ರದಲ್ಲಿ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು.

ಅನುಬಂಧ – 1

ಬಂಡೀಪಾಳ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಒದಗಿಸಿರುವ ಸೌಲಭ್ಯಗಳ ವಿವರ

ಕ್ರ. ಸಂ.	ವಿವರ	ಮೌಲ್ಯ (ರೂ. ಲಕ್ಷಗಳಲ್ಲಿ)
1.	ಬಂಡೀಪಾಳ್ಯ ಮಾರುಕಟ್ಟೆ ಪ್ರಾಂಗಣದ ಜಮೀನು–159.8 1/2 ಎಕರೆ (ಭೂಸ್ವಾಧೀನ)	1,41,00,000–00
2.	ಹರಾಜು ಕಟ್ಟೆಗಳು 8 ಸಂಖ್ಯೆ	1,09,77,877–00
3.	ತೆರೆದ ಹರಾಜು ಕಟ್ಟೆಗಳು–2 ಸಂಖ್ಯೆ	21,713–00
4.	ಗೋದಾಮುಗಳು–"ಬಿ" ಬ್ಲಾಕಿನಲ್ಲಿ–58	61,68,252–00
5.	20 ಸಂಖ್ಯೆ ಈರುಳ್ಳಿ ಆಲೂಗಡ್ಡೆ ಗೋದಾಮುಗಳ ನಿರ್ಮಾಣ– "ಎ" ಬ್ಲಾಕಿನಲ್ಲಿ.	40,00,000–00
6.	ಸಂಖ್ಯೆ ಅಂಗಡಿ ಮಳಿಗೆ	3,63,115–00
7.	ಕ್ಯಾಂಟೀನ್ ಕಟ್ಟಡ ಮತ್ತು 3 ಸಂಖ್ಯೆ ಟೀ ಸ್ಟಾಲುಗಳು	4,55,013–00
8.	ನೀರು ಸರಬರಾಜು ಹಾಗೂ ಶೌಚಾಲಯ–4 ಸಂಖ್ಯೆ	18,62,878–00
9.	ತನಿಖಾ ಠಾಣೆ–2 ಸಂಖ್ಯೆ (ಎ ಮತ್ತು ಬಿ ಬ್ಲಾಕಿನಲ್ಲಿ)	29,745–00
10.	ಪೊಲೀಸ್ ಔಟ್ ಪೋಸ್ಟ್–1 ಸಂಖ್ಯೆ	1,51,374–00
11.	ಕಾಂಪೌಂಡ್ ಗೋಡೆ	11,39,779–00
12.	ರೈತರ ವಿಶ್ರಾಂತಿ ಗೃಹ–1 ಸಂಖ್ಯೆ	2,52,885–00
13.	ವಿದ್ಯುನ್ಮಾನ ತೂಕದ ಸೇತುವೆ–1 ಸಂಖ್ಯೆ	10,00,000–00
14.	ಮಾರುಕಟ್ಟೆ ಪ್ರಾಂಗಣದ ವಿದ್ಯುದೀಕರಣ ಹಾಗೂ ಜನರೇಟರ್	1,58,90,950–00

1	2	3
15.	ಶ್ರಮಿಕ ಭವನ – 1 ಸಂಖ್ಯೆ	2,70,000–00
16.	ಹಮಾಲರ ವಸತಿ ಗೃಹ–120 ಸಂಖ್ಯೆ	90,00,000–00
17.	ಪ್ರಾಂಗಣದಲ್ಲಿ ಬಾಕ್ಸ್ ಚರಂಡಿ ನಿರ್ಮಾಣ	36,71,091–00
18.	ಆಡಳಿತ ಕಛೇರಿ ಕಟ್ಟಡ	15,08,119–00
19.	ಪ್ರಾಂಗಣದಲ್ಲಿ ರಸ್ತೆಗಳ ನಿರ್ಮಾಣ	1,59,63,334–00
20.	ಕಲ್ವರ್ಟ್ಗಳ ನಿರ್ಮಾಣ	14,95,813–00
21.	ನೌಕರರ ವಸತಿ ಗೃಹ–16 ಸಂಖ್ಯೆ	19,70,581–00
	ಒಟ್ಟು ರೂ.	**9,02,92,519–00**

ಅನುಬಂಧ – 2

ಬಂಡೀಪಾಳ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಪ್ರಸ್ತುತ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು ಹಾಗೂ ಅಂದಾಜು ವಿವರ

ಕ್ರ. ಸಂ.	ವಿವರ	ಮೌಲ್ಯ (ರೂ. ಲಕ್ಷಗಳಲ್ಲಿ)
1.	ಬಂಡೀಪಾಳ್ಯ ಮಾರುಕಟ್ಟೆ ಪ್ರಾಂಗಣದ "ಎ" ಬ್ಲಾಕ್ ನಲ್ಲಿ ರಸ್ತೆಗಳಿಗೆ ಡಾಂಬರೀಕರಣ	35.00
2.	ಬಂಡಿಪಾಳ್ಯ ಮಾರುಕಟ್ಟೆ ಪ್ರಾಂಗಣದ "ಎ" ಬ್ಲಾಕಿನ ಮುಖ್ಯ ಜೋಡಿ ರಸ್ತೆಗೆ ಡಾಂಬರೀಕರಣ	17.80
3.	ಬಂಡೀಪಾಳ್ಯ ಮಾರುಕಟ್ಟೆ ಪ್ರಾಂಗಣದ "ಎ" ಬ್ಲಾಕಿನ ನಿವೇಶನ ಸಂಖ್ಯೆ 42 ರಿಂದ 64ರವರೆಗಿನ ಜೋಡಿ ರಸ್ತೆಗೆ ಡಾಂಬರೀಕರಣ	11.00
4.	ಬಂಡೀಪಾಳ್ಯ ಮಾರುಕಟ್ಟೆ ಪ್ರಾಂಗಣದ "ಬಿ" ಬ್ಲಾಕಿನಲ್ಲಿ ಹೊಸದಾಗಿ ನಿರ್ಮಿಸಿರುವ ನಿವೇಶನ ಸಂಖ್ಯೆ 322 ರಿಂದ 406 ರವರೆಗೆ ಬರುವ ಮುಖ್ಯ ರಸ್ತೆಗಳು, ಅಡ್ಡರಸ್ತೆಗಳು, ಡೆಕ್ ಸ್ಲ್ಯಾಬ್ ಹಾಗೂ ಚರಂಡಿ ನಿರ್ಮಾಣ	18.00
5.	ಬಂಡೀಪಾಳ್ಯ ಮಾರುಕಟ್ಟೆ ಪ್ರಾಂಗಣದ "ಬಿ" ಬ್ಲಾಕಿನ ಹಮಾಲರ ವಸತಿ ಗೃಹಗಳ ಪಶ್ಚಿಮದಿಂದ "ಎ" ಬ್ಲಾಕಿನ ನಿವೇಶನ ಸಂಖ್ಯೆ 224 ರವರೆಗೆ ರಸ್ತೆ ಚರಂಡಿ ಮತ್ತು ಡೆಕ್ ಸ್ಲ್ಯಾಬ್ ನಿರ್ಮಾಣ	15.20
6.	ಬಂಡೀಪಾಳ್ಯ ಮಾರುಕಟ್ಟೆ ಪ್ರಾಂಗಣದ ಒಳಚರಂಡಿ ವ್ಯವಸ್ಥೆ ಕಾಮಗಾರಿ	12.00
	ಒಟ್ಟು ರೂ.	**109.00**

2003–04ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಮಂಜೂರಾಗಿರುವ ಕಾಮಗಾರಿಗಳ ವಿವರ.

1.	ಬಂಡೀಪಾಳ್ಯ ಮಾರುಕಟ್ಟೆ ಪ್ರಾಂಗಣದ "ಎ" ಬ್ಲಾಕಿನ 4ನೇ ಅಡ್ಡ ರಸ್ತೆಗೆ ಡಾಂಬರೀಕರಣ	5.00

2.	ಬಂಡೀಪಾಳ್ಯ ಮಾರುಕಟ್ಟೆ ಪ್ರಾಂಗಣದ "ಎ" ಬ್ಲಾಕಿನ ನಿವೇಶನ ಸಂಖ್ಯೆ 151 ರಿಂದ "ಬಿ" ಬ್ಲಾಕಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಗೆ ಡಾಂಬರೀಕರಣ.	9.00
3.	ಬಂಡೀಪಾಳ್ಯ ಮಾರುಕಟ್ಟೆ ಪ್ರಾಂಗಣದ "ಬಿ" ಬ್ಲಾಕಿನ 6ನೇ ಅಡ್ಡ ರಸ್ತೆಗೆ ಡಾಂಬರೀಕರಣ	8.00
4	ಬಂಡೀಪಾಳ್ಯ ಮಾರುಕಟ್ಟೆ ಪ್ರಾಂಗಣದ ಒಳಚರಂಡಿ ವ್ಯವಸ್ಥೆಯನ್ನು ಮೈಸೂರು ನಗರ ಪಾಲಿಕೆಯ ಸುಯೇಜ್ ಸಂಪರ್ಕ ಕಲ್ಪಿಸುವ ಕಾಮಗಾರಿ.	30.00
5.	ಬಂಡೀಪಾಳ್ಯ ಮಾರುಕಟ್ಟೆ ಪ್ರಾಂಗಣದ "ಎ" ಬ್ಲಾಕಿನ 5ನೇ ಅಡ್ಡ ರಸ್ತೆಗೆ ಡಾಂಬರೀಕರಣ.	8.00
	ಒಟ್ಟು	**60.00**

ರಾಜ್ಯದ ಕೃಷಿ ವಿಮಾ ಯೋಜನೆಯಡಿಯಲ್ಲಿ ನೀಡಿದ ವಿಮಾ ಹಣ

2384 (2976) : ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002–2003ನೇ ಸಾಲಿನವರೆವಿಗೂ ಎಷ್ಟು ಮಂದಿ ರೈತಾಪಿ ವರ್ಗದವರು ಕೃಷಿ ವಿಮಾ ಯೋಜನೆಯಲ್ಲಿ ಪಾಲ್ಗೊಂಡು ಹೆಸರನ್ನು ನೋಂದಾಯಿಸಿರುವರು:

ಆ) ಕೃಷಿ ವಿಮಾ ಯೋಜನೆಯಡಿಯಲ್ಲಿ ನಷ್ಟ ಹೊಂದಿದ ಬಡ ರೈತಾಪಿ ವರ್ಗದವರಿಗೆ ನೀಡುವ ವಿಮಾ ಹಣವೆಷ್ಟು: ವಿವರ ಒದಗಿಸುವುದು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಯೋಜನೆ ಪ್ರಾರಂಭವಾದಾಗಿನಿಂದ 2002ರ ಮುಂಗಾರು ಹಂಗಾಮಿನವರೆವಿಗೂ 19,34,264 ರೈತರು ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿಯಲ್ಲಿ ಪಾಲ್ಗೊಂಡಿರುತ್ತಾರೆ. ರಾಷ್ಟ್ರೀಯ ಕೃಷಿ ವಿಮಾ ಯೋಜನೆ ರಾಜ್ಯದಲ್ಲಿ ಪ್ರಾರಂಭವಾದ 2000–01ನೇ ಸಾಲಿನಲ್ಲಿ 3,84,233 ರೈತರು 2001–02ರಲ್ಲಿ 6,76,910 ರೈತರು ಹಾಗೂ 2002ರ ಮುಂಗಾರು ಹಂಗಾಮಿನಲ್ಲಿ 8,73,121 ರೈತರು ಯೋಜನೆಯಡಿಯಲ್ಲಿ ಪಾಲುಗೊಂಡಿರುತ್ತಾರೆ. 2002–03ರ ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳ ವಿವರಗಳನ್ನು ಭಾರತೀಯ ಸಾಮಾನ್ಯ ವಿಮಾ ನಿಗಮವು ಇನ್ನೂ ಕ್ರೋಢೀಕರಿಸುತ್ತಿದ್ದು ಪಾಲ್ಗೊಂಡ ರೈತರ ವಿವರಗಳು ಇನ್ನೂ ಲಭ್ಯವಿರುವುದಿಲ್ಲ.

ಆ) 2000–01ನೇ ಸಾಲಿನಲ್ಲಿ ಬೆಳೆ ವಿಮಾ ನಷ್ಟ ಪರಿಹಾರವಾಗಿ ರೂ. 4.057 ಕೋಟಿ, 2001–02ನೇ ಸಾಲಿನಲ್ಲಿ 134,732 ಕೋಟಿಗಳನ್ನು ರೈತರಿಗೆ ವಿತರಿಸಲಾಗಿದೆ. 2002ರ ಮುಂಗಾರು ಹಂಗಾಮಿನಲ್ಲಿ ಬೆಳೆ ವಿಮಾ ನಷ್ಟ ಪರಿಹಾರವು ರೂ. 330.00 ಕೋಟಿಗಳೆಂದು ಭಾರತೀಯ ಸಾಮಾನ್ಯ ವಿಮಾ ನಿಗಮವು ಅಂದಾಜು ಮಾಡಿರುತ್ತದೆ. ಮೊದಲನೇ ಹಂತದಲ್ಲಿ 9 ಬೆಳೆಗಳ ರೂ. 29.41 ಕೋಟಿ ಬೆಳೆ ನಷ್ಟ ಪರಿಹಾರಕ್ಕೆ ಕೇಂದ್ರ ಸರ್ಕಾರದ ಅನುಮೋದನೆ ದೊರೆತಿದ್ದು, ಈ ಹಣವನ್ನು ಶೀಘ್ರದಲ್ಲಿಯೇ ರೈತರಿಗೆ ವಿತರಿಸಲಾಗುವುದು.

ರಾಜ್ಯದ ಕೃಷಿ ವಿಮಾ ಯೋಜನೆಯಲ್ಲಿ ಬಾಳೇಗಿಡಕ್ಕೆ ವಿಮಾ ಸೌಲಭ್ಯ

2385 (2977) : ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?